**ದಿನಾಂಕಃ 06-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಕೆ ಎನ್ ವಕೀಲರಿಂದಃ**

ನೂರುಲ್ಲಾ ಮುನೀರ್ ಸಾಬ್ ನನ್ನ ಮಗ ಎಂದರೆ ಸರಿ. ಸದರಿ ಮುನೀರ ಸಾಬ್ ನ ಮೇಲೆ ಎಮ್ ವಿ ಸಿ ನಂ.564/2020 ರ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನ್ನ ಮಗ 2 ನೇ ಎದುರುದಾರರು ಇದ್ದು ಆ ಪ್ರಕರಣದ ಅರ್ಜಿದಾರರೊಂದಿಗೆ ರಾಜಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಅರ್ಜಿದಾರರು ತಾವು 2 ನೇ ಎದುರುದಾರರೊಂದಿಗೆ ತಾವು ನ್ಯಾಯಾಲಯದ ಹೊರಗಡೆ ರಾಜಿಯಾಗಿದ್ದು ಆ ಕಾರಣ 2 ನೇ ಎದುರುದಾರರ ವಿರುದ್ಧ ಅರ್ಜಿಯನ್ನು ವಜಾ ಮಾಡಬೇಕೆಂದು ಮೆಮೋ ಕೊಟ್ಟಿರುತ್ತಾರೆ ಎಂದರೆ ನನ್ನ ಮಗ ಕೋರ್ಟಿಗೆ ಬಂದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಿನಾಂಕ 24.12.2019 ರಂದು ದಾಖಲಾಗಿರುತ್ತೇನೆ. ನಂತರ ನಾನು ರಾಣೇಬೆನ್ನೂರಿನ ಓಂ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ಅದರ ನಂತರ ನಾನು ಬೇರೆ ಆಸ್ಪತ್ರೆಗೆ ಹೋಗಿರುವುದಿಲ್ಲ. ಆ ಬಗ್ಗೆ ಅರ್ಜಿಯಲ್ಲಿ ನಮೂದಿಸಿದ್ದೀರಾ ಎಂದರೆ ನಮೂದಿಸಿರುತ್ತೇನೆ. ಓಂ ಆಸ್ಪತ್ರೆಗೆ ದಾಖಲಾದ ಬಗ್ಗೆ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ವಕೀಲರ ಬಳಿ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಓಂ ಆಸ್ಪತ್ರೆಯ ಜೊತೆ ಮಿಲಾಪಿಯಾಗಿ ಆ ದಾಖಲೆಯನ್ನು ಸೃಷ್ಠಿಸಿದ್ದೀರಾ ಎಂದರೆ ಸರಿಯಲ್ಲ. ಡಾಂಬಾರ ಮಿಶನ್ ಅಪಘಾತದ ದಿನದಂದು ರಸ್ತೆಯ ಮಧ್ಯದಲ್ಲಿ ನಿಂತುಕೊಂಡಿತ್ತು ಎಂದು ನುಡಿಯುತ್ತಾರೆ. ನನ್ನ ವಾಹನಕ್ಕೆ ಲೈಟು ಇತ್ತು. ನನ್ನ ವಾಹನಕ್ಕೆ ಲೈಟು ಇದ್ದರೇ ಮುಂದೆ ಹೋಗುತ್ತಿದ್ದ ಜನರಾಗಲೀ ಹಾಗೂ ವಾಹನವಾಗಲೀ ಕಾಣುತ್ತಿತ್ತು ಎಂದರೆ ಅವರು ಇಂಡಿಕೇಟರ್ ಹಾಕಿರಲಿಲ್ಲ ಕಾಣಿಸಲಿಲ್ಲ ಎಂದು ನುಡಿಯುತ್ತಾರೆ. ಆ ದಿನದಂದು ವಾಹನವು ರಸ್ತೆಯ ಎಡಬದಿಯಲ್ಲಿ ನಿಂತಿದ್ದು ನಾನು ನನ್ನ ವಾಹನವನ್ನು ಅತೀ ವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ನಿಂತ ವಾಹನವನ್ನು ಸರಿಯಾಗಿ ಗಮನಿಸದೇ ಡಿಕ್ಕಿಪಡಿಸಿಕೊಂಡು ಅಪಘಾತಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ಮ್ಯಾಕ್ಸ ಆಸ್ಪತ್ರೆಯಲ್ಲಿ ಒಂದು ತಿಂಗಳವರೆಗೆ ಒಳರೋಗಿಯಾಗಿ ದಾಖಲಾಗಿದ್ದು ನಂತರ ಹೊರರೋಗಿಯಾಗಿ 6 ತಿಂಗಳವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಯಾವ ದಿನಾಂಕದಂದು ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆಯಲೆಂದು ಹೋಗಿದ್ದೇನೆಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಸಾಕ್ಷಿಯೂ ವಾರಕ್ಕೆ ಒಮ್ಮೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಮ್ಯಾಕ್ಸ ಆಸ್ಪತ್ರೆಗೆ ಒಳರೋಗಿಯಾಗಿ

ದಾಖಲಾಗಿದ್ದಾಗ 2,50,000/- ಖರ್ಚಾಗಿತ್ತು. ಸದರಿ 2,50,000/- ಖರ್ಚು ಆಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ಪ್ರತಿ ವಾರಕ್ಕೆ ಹೋಗುವಾಗ 10,000/- ಖರ್ಚು ಮಾಡಿರುತ್ತೇನೆ ಎಂದು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಡಿಸ್ಚಾರ್ಜ ಸಮ್ಮರಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ದಾಖಲಾಗದೇ ಇದ್ದಿದ್ದರಿಂದ ಡಿಸ್ಚಾರ್ಜ ಸಮ್ಮರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಓಂ ಆಸ್ಪತ್ರೆಯಲ್ಲಿ 4 ದಿವಸಗಳ ಕಾಲ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಸದರಿ ಆಸ್ಪತ್ರೆಯ ಡಿಸ್ಚಾರ್ಜ ಸಮ್ಮರಿಯನ್ನು ವಕೀಲರ ಬಳಿ ಕೊಟ್ಟಿದ್ದೇನೆ. ನಾನು ದಾಖಲಾಗದೇ ಇದ್ದಿದ್ದರಿಂದ ಡಿಸ್ಚಾರ್ಜ ಸಮ್ಮರಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತವಾಗಿದ್ದರೂ ಸಹ ಡಾಂಬಾರು ಮಶೀನ್ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದರು ಆ ಕಾರಣ ಅವರದೇ ತಪ್ಪು ಇದೆ ಎಂದು ಪೋಲಿಸರಿಗೆ ಸುಳ್ಳು ದೂರು ಕೊಟ್ಟು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಅಪಘಾತಕ್ಕೆ ಸಂಬಂದಪಟ್ಟಂತೆ ಹೊನ್ನಾಳಿ ಪೋಲಿಸರು ಸಲ್ಲಿಸಿದ ಸಿಸಿ ನಂ.530/2020 ರಲ್ಲಿ ನಾನು ಕಲಂ.279,337 ಗಳ ಅಡಿಯಲ್ಲಿ ಅಪರಾಧ ಮಾಡಿದ್ದೇನೆಂದು ತಪ್ಪ ಒಪ್ಪಿಕೊಂಡು ನ್ಯಾಯಾಲಯದ ಮುಂದೆ ದಂಡ ಕಟ್ಟಿರುತ್ತೇನೆ ಎಂದರೆ ಸರಿ. ಎದುರುದಾರರು ಅಪಘಾತದ ದಿನದಂದು ಡಾಂಬಾರ ಮಶೀನಿನ ಮಾಲೀಕರು ಆಗಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಸದರಿ ಮಶೀನಿನ ಮಾಲೀಕನೇ ಅಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನಾನು ಬೈಕಿನ ಮಾಲೀಕ ಅಂದರೆ ನನ್ನ ಮಗ ಮತ್ತು ನಮ್ಮ ಬೈಕಿನ ಇನ್ಸುರನ್ಸ ಕಂಪನಿಯವರನ್ನು ಪ್ರಸ್ತುತ ಅರ್ಜಿಯಲ್ಲಿ ಪಕ್ಷಗಾರರಾಗಿ ಕಾಣಿಸದೇ ಇರುವುದರಿಂದ ಪ್ರಸ್ತುತ ಅರ್ಜಿ ಕಾನೂನಿನ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಎದುರುದಾರು ತಪ್ಪು ಇರದೇ ಇದ್ದರೂ ಸಹ ಪರಿಹಾರ ಪಡೆಯಲೆಂದು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯನ್ನು ಹೊರತುಪಡಿಸಿ ನಾನು ಬೇರೆ ಪ್ರಕರಣದಲ್ಲಿ ಪರಿಹಾರಕ್ಕಾಗಿ ಅರ್ಜಿ ಹಾಕಿಲ್ಲ ಎಂದರೆ ಸರಿ. ನಾನು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.